Indian Journal of History and Archaeology

ISSN (E):2582-225X
VOL-2, ISSUE -4,NOVEMBER-DECEMBER, 2020, 31-46

# ಸಮಕಾಲೀನ ಕರ್ನಾಟಕ ಇತಿಹಾಸದಲ್ಲಿ ಮರ್ಯಾದೆಗೇಡು ಹತ್ಯೆಗಳು–ವಿಮರ್ಶಾತ್ಮಕ ವಿಶ್ಲೇಷಣೆ

**ಡಾ. ಕೆ. ಗುರುಸ್ವಾಮಿ**

**ಡಾ. ಕೆ. ಗುರುಸ್ವಾಮಿ**
ಸಮಾಜ–ವಿಜ್ಞಾನ ಶಿಕ್ಷಕರು
ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ
ಹೊಳೆನರಸೀಪುರ, ಹಾಸನ.

ಕ್ರಿಸ್ತಪೂರ್ವದಲ್ಲಿ ಬ್ರಾಹ್ಮಣಶಾಹಿಗಳಿಂದ ಸೃಷ್ಟಿಯಾದ ಚಾತುರ್ವರ್ಣಾಧರಿತ ಶ್ರೇಣೀಕೃತ ಜಾತಿವ್ಯವಸ್ಥೆಯು ಭಾರತದಾದ್ಯಂತ ತನ್ನ ಎಲ್ಲೆ ಮೀರಿ ವ್ಯಾಪಿಸಿತ್ತು.ಇದರಿಂದಾಗಿ ಭಾರತೀಯ ಜನಜೀವನ ವ್ಯವಸ್ಥೆಯಲ್ಲಿ ಸಂಕೀರ್ಣವಾದ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಅಂತರ ಬಹಳ ಕಟ್ಟುನಿಟ್ಟಾಗಿ ಆಚರಣೆಗೆ ಬಂದಿತು.ಇದರ ಹಿನ್ನಲೆಯಲ್ಲಿ ಮೇಲ್ಜಾತಿಗಳು ಸಮಾಜದಲ್ಲಿ ಕೆಳಜಾತಿಗಳಮೇಲೆ ಜಾತಿ ಪ್ರಾಬಲ್ಯದ ಏಕಸ್ವಾಮ್ಯವನ್ನು ಸ್ಥಾಪಿಸಿದರು.ಇದರ ಜೊತೆಗೆ ಇಲ್ಲಿನ ಎಲ್ಲಾ ರಂಗಗಳಲ್ಲೂ ವೈಯುಕ್ತಿಕ ಅಸ್ತಿತ್ವಕ್ಕೆ ಚ್ಯುತಿಬಾರದಂತೆ ತಮ್ಮ ಸ್ಥಾನಮಾನಗಳನ್ನು ಕಾಪಾಡಿಕೊಂಡರು. ಜೊತೆಗೆ ಜಾತೀಯತೆಯ ಹೆಸರಿನಲ್ಲಿ ಶೂದ್ರಾದಿಶೂದ್ರರುಗಳು ಅಂದರೆ ಅಸ್ಪೃಶ್ಯರು, ಹರಿಜನ ಸಮುದಾಯಗಳ ಮೇಲೆ ಮನಬಂದಂತೆ ಕರುಣಾಹೀನವಾಗಿ ಕ್ರೌರ್ಯಗಳನ್ನು ನಡೆಸಲು ಪ್ರಾರಂಭಿಸಿದರು. ಇದರ ಮೂಲಕ ಇವರನ್ನು ತಮ್ಮ ಗುಲಾಮರನ್ನಾಗಿಸಿಕೊಂಡು ದಾಸ್ಯ ಸಂಕೋಲೆಯಲ್ಲಿ ಬಂಧಿಸಿದರು. ವೈದಿಕ ಶಾಹಿಗಳು ನಿರ್ಮಿತ ಜಾತೀಯತೆಯ ಕಲುಷಿತ ಮಹಾಗೋಡೆಯನ್ನು ಬುಡಸಮೇತವಾಗಿ ಉರುಳಿಸಲು ಮಧ್ಯಯುಗೀನ ಹಾಗೂ ಆಧುನಿಕ ಕಾಲಘಟ್ಟಗಳಲ್ಲಿ ಹಲವಾರು ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು, ಬುದ್ಧಿಜೀವಿಗಳು, ಸಮಸಮಾಜದ ನಿರ್ಮಾಣದ ಪ್ರವರ್ತಕರು ಪ್ರಯತ್ನಿಸಿದ್ದರು. ಇವರುಗಳು 'ಅಂತರ್ಜಾತಿ ವಿವಾಹವೇ ಜಾತಿವಿನಾಶಕ್ಕೆ ಮೂಲೌಷಧ'ಎಂದು ನಿರ್ಧರಿಸಿ ಜಾತಿಜಾಡ್ಯತೆಯ ಕಬಂಧಬಾಹುಗಳನ್ನು ನಿರ್ನಾಮ ಮಾಡಲು ಸಿದ್ಧಹಸ್ತರಾದರು.ಅಂತವರುಗಳ ಸಾಲಿನಲ್ಲಿ 12ನೇ ಶತಮಾನದಲ್ಲಿದ್ದ ಬಸವಣ್ಣನವರು ಅಗ್ರಗಣ್ಯ ಸ್ಥಾನದಲ್ಲಿ ಬಂದು ನಿಲ್ಲುತ್ತಾರೆ.ಬಸವಣ್ಣನವರು ಮಾನವ ಸಮಾಜದಲ್ಲಿ ಪ್ರಪ್ರಥಮ ಬಾರಿಗೆ ಜಾತಿವಿನಾಶಕ್ಕಾಗಿ 'ಅಂತರ್ಜಾತಿ ವಿವಾಹದ

ಪ್ರಯೋಗ' ಮಾಡಿದ್ದರು.ಆದರೆ ಜಾತಿರಹಿತ ಸಮಾಜ ನಿರ್ಮಾಣದ ಇವರ ಪ್ರಯೋಗವು ಮೇಲ್ವರ್ಗಗಳ ಜಾತೀಯತೆಯ ಜ್ವಾಲೆಗೆ ಸಿಲುಕಿಮರ್ಯಾದೆಗೇಡು ಹತ್ಯೆಯಲ್ಲಿ ಅಂತ್ಯವಾಯಿತು.ಹೀಗಾಗಿ ಇವರ ಅಂತರ್ಜಾತಿ ವಿವಾಹದ ಮುಖೇನ ಮಾನವೀಯ ಸಮಾನತೆಯಸಮಸಮಾಜ ನಿರ್ಮಾಣದ ಆಶಾಗೋಪುರ ಜಾತಿವಾದಿಗಳ ಕೆಂಗಣ್ಣಿಗೆ ಗುರಿಯಾಗಿಪುಡಿಪುಡಿಯಾಯಿತು.ಇಂತಹ ಘಟನೆ ಅಂದು ನಿರಂಕುಶ ರಾಜಪ್ರಭುತ್ವದ ಆಡಳಿತಗಾರರು ಅಂತರ್ಜಾತಿ ವಿವಾಹವಾಗಲೂ ಮುಂದಾಗಿದ್ದ ವಧುವರರುಗಳನ್ನು ಒಳಗೊಂಡಂತೆ ಅವರ ಪೋಷಕರುಗಳಿಗೂ ಕೂಡ ಮಾರಣಾಂತಿಕವಾಗಿ ಚಿಂತ್ರಹಿಂಸೆ ನೀಡಿ ಸರ್ವಜನರ ಸಮ್ಮುಖದಲ್ಲಿ ಭೀಕರವಾಗಿ ಪ್ರಾಣವನ್ನು ತೆಗೆಯುವ ಪ್ರಮಾದವನ್ನು ಎಸಗಿ ಜಾತೀಯತೆಯ ರಕ್ಷಕರಾಗಿದ್ದರು.ಆದರೆ 20-21ನೇ ಶತಮಾನಗಳಲ್ಲಿ ಅಂತರ್ಜಾತಿ ವಿವಾಹ ಹಾಗೂ ಅಂತರ್ಧರ್ಮೀಯ ವಿವಾಹ ಮಾಡಿಕೊಂಡ ನವಜೋಡಿಗಳು, ಅನ್ಯಜಾತಿಯ ಹುಡುಗ ಅಥವಾ ಹುಡುಗಿಯನ್ನು ಪ್ರೀತಿಸಿ ಓಡಿಹೋಗಲು ಪ್ರಯತ್ನಿಸಿದ ಮುಗ್ಧ ಪ್ರೇಮಿಗಳ ಜಾತಿವಾದಿ ತಂದೆತಾಯಂದಿರೇ ಇವರುಗಳನ್ನು ಹಿಡಿದು ಅಮಾನುಷವಾಗಿ ಹತ್ಯೆ ಮಾಡುವ ಹೀನಕೃತ್ಯಕ್ಕೆ ಇಳಿದಿದ್ದಾರೆ.ಇದರ ಹಿನ್ನಲೆಯಲ್ಲಿ ಪ್ರಸ್ತುತ ಸಂದರ್ಭದಲ್ಲಿ ಇಂತಹ ಹತ್ಯೆಗಳು 'ಮರ್ಯಾದೆಗೇಡು ಹತ್ಯೆ'ಗಳೆಂದೇ ಸಮಾಜದಲ್ಲಿ ಕುಖ್ಯಾತಿ ಪಡೆದು ಮಾನವಸಮಾಜಕ್ಕೆ ಕಳಂಕಪ್ರಾಯವಾಗಿವೆ. ಹೀಗಾಗಿ ಈ ಲೇಖನದಲ್ಲಿ 'ಮರ್ಯಾದೆಗೇಡು ಹತ್ಯೆ ಎಂದರೇನು?', 'ಮರ್ಯಾದೆಗೇಡು ಹತ್ಯೆಗಳಿಗೆ ಕಾರಣವಾದ ಅಂಶಗಳು', 'ಜಾತಿವಿನಾಶದ ಹಿನ್ನಲೆಯಲ್ಲಿ ರಾಜ್ಯದಲ್ಲಿ ಮೊಳಗಿದಅಂತರ್ಜಾತಿ ವಿವಾಹಗಳ ಕ್ರಾಂತಿಕಹಳೆ', 'ಕರ್ನಾಟಕದಲ್ಲಿ ಜಾತಿವಾದಿ ಪೋಷಕರುಗಳಿಂದ ನಡೆದ ಮರ್ಯಾದೆಗೇಡು ಹತ್ಯೆಗಳು' ಹಾಗೂ 'ಮರ್ಯಾದೆಗೇಡು ಹತ್ಯೆಗಳನ್ನು ತಡೆಗಟ್ಟಲೇಬೇಕಾದ ಅನಿವಾರ್ಯತೆ' ಇವುಗಳನ್ನು ಕುರಿತಾಗಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

- **ಮರ್ಯಾದೆಗೇಡು ಹತ್ಯೆ ಎಂದರೇನು?**

ಭಾರತ ದೇಶವು ಜಾತಿವ್ಯವಸ್ಥೆಯ ಸಂಕೇತವಾದ ಮೇಲುಕೀಲು, ಉಚ್ಚನೀಚ, ಬಡವಬಲ್ಲಿದ, ಜಾತಿಬೇಧಗಳ ತವರೂರು ಎಂದೇ ಜಗಜ್ಜಾಹಿರಾಗಿರುವ ರಾಷ್ಟ್ರವಾಗಿದೆ.ಇಲ್ಲಿನ ಸಮಾಜದಲ್ಲಿ ವಾಸಿಸುತ್ತಿರುವ ಜಾತೀಯತೆಯನ್ನು ಮೇಲ್ವರ್ಗದ ಯಾವ ಜಾತಿಯವರೇ ಆಗಲಿ, ಧರ್ಮೀಯರೇ ಆಗಲಿ ಸನಾತನ ವರ್ಣಾಶ್ರಮಾಧರಿತ ಶ್ರೇಣೀಕೃತ ಜಾತೀಯತೆ, ಮತೀಯತೆಯ ಕೋಮುಭಾವನೆಯನ್ನು ತಮ್ಮ ತನುಮನದಲ್ಲಿಟ್ಟುಕೊಂಡು ಕಾಪಾಡಿಕೊಂಡು ಬರುತ್ತಿದ್ದಾರೆ.ಇವರುಗಳು ತಮ್ಮ ಜಾತಿವಾದಿ ಮನೆತನದ ಗೌರವ, ಜಾತಿಪ್ರತಿಷ್ಠೆ, ಕುಲಮರ್ಯಾದೆ, ವೈಯುಕ್ತಿಕ ಸ್ಥಾನಮಾನ,ಸಂಪ್ರದಾಯಬದ್ಧ ಆಚಾರ-ವಿಚಾರ, ರೂಢಿ,ಸಂಪ್ರದಾಯಗಳಿಗೆ ನಿಷ್ಠರಾಗಿದ್ದಾರೆ.ಇಂತಹ ಸನಾತನ ಅಂಧ ಸಂಪ್ರದಾಯದ ಅಸಮಾನತೆಯ

ಪ್ರತೀಕವಾದ ತಮ್ಮ ಮೇಲ್ಜಾತಿಯ ಕಟ್ಟುಪಾಡು, ವಿಧಿವಿಧಾನಗಳಿಗೆ ಸ್ವಂತ ಕುಟುಂಬದ ಸದಸ್ಯರಿಂದಾಗಬಹುದು ಅಥವಾ ತಮ್ಮ ರಕ್ತಸಂಬಂಧವರಿಂದಾಗಬಹುದು ಆದಿಕಾಲದಿಂದಲೂ ಸಮಾಜದಲ್ಲಿ ಬಿಂಬಿತವಾಗಿರುವ ಬೇರೊಂದು ಕೀಳುಜಾತಿಯ ಜೊತೆ ವೈವಾಹಿಕ ಸಂಬಂಧ ಬೆಳೆಸುವುದು ಅಥವಾ ತಾವು ಪ್ರೀತಿಸಿದವರ ಜೊತೆ ಓಡಿಹೋಗುವುದರ ಮೂಲಕ ಭಂಗವಾದರೆ ಅದನ್ನು ಮನೆತನದ ಜಾತಿಶ್ರೇಷ್ಠತೆ, ಸಂಸ್ಕೃತಿ, ಸಂಸ್ಕಾರಗಳ ಗೌರವಕ್ಕಾದ ಅವಮಾನವೆಂದುಭಾವಿಸಿ ಅಂತಹವರ ಪ್ರಾಣವನ್ನು ಕಟುಕರಂತೆ ಕಠೋರವಾಗಿ ತೆಗೆಯುವ ದುಷ್ಕೃತ್ಯಗಳೇ'ಮರ್ಯಾದೆಗೇಡು ಹತ್ಯೆ'ಗಳಾಗಿವೆ.ಸಾಮಾನ್ಯವಾಗಿ ಇಂತಹ ಹೃದಯವಿದ್ರಾವಕ ಹೇಯಕೃತ್ಯಗಳುಅಂತರ್ಜಾತಿ ವಿವಾಹಕ್ಕೊಳಗಾದಮೇಲ್ವರ್ಗದ ಬಹುಪಾಲು ಹೆಣ್ಣುಮಕ್ಕಳು ಮತ್ತುಅನ್ಯಜಾತಿಗಳನವಜೋಡಿಗಳು ಹಾಗೂ ಯುವಪ್ರೇಮಿಗಳ ಮೇಲೆ ನಡೆದುಹೋಗಿವೆ.

- **ಮರ್ಯಾದೆಗೇಡು ಹತ್ಯೆಗಳಿಗೆ ಕಾರಣವಾದ ಅಂಶಗಳು**:

ಶ್ರೇಣೀಕೃತ ಜಾತಿವ್ಯವಸ್ಥೆಯ ಈ ಭಾರತೀಯ ಸಮಾಜದಲ್ಲಿ ಜಾತೀಯತೆ ಇಂದು ಸಹ ಮಡುಗಟ್ಟಿ ಜಾತಿವಾದಿ ಮೇಲ್ಜಾತಿ ಜಡಮನಸ್ಸುಗಳಲ್ಲಿ ಕುಣಿದಾಡುತ್ತಿದೆ.ಹೀಗಾಗಿ ಮಾನವನಿರ್ಮಿತ ಈ ಅನೀತಿಯುತ ಜಾತಿಕಟ್ಟುಪಾಡುಗಳನ್ನು ಎಡೆಮುರಿಕಟ್ಟಿ ಜಾತಿರಹಿತ ಸಮಾನತೆಯ ಸಮಾಜವನ್ನು ನಿರ್ಮಿಸುವುದು ಅಸಾಧ್ಯದ ಕೆಲಸವಾಗಿದೆ.ಈ ಅಂಥ ವ್ಯವಸ್ಥೆಯನ್ನು ಮುರಿಯಲಿಕ್ಕೆ ಅಂತರ್ಜಾತಿ ವಿವಾಹಗಳ ಮುಖೇನ ಆಗುತ್ತಿರುವ ಪ್ರಯತ್ನಗಳಿಗೆ ಜಾತೀಯತೆಯ ಪಾಲಕರಾದ ಜಾತಿವಾದಿ ಮೇಲ್ವರ್ಗದ ಪೋಷಕರುಗಳಿಂದಲೇ ಮರ್ಯಾದೆಗೇಡು ಹತ್ಯೆಗಳ ಮೂಲಕ ಮುನ್ನುಡಿ ಬರೆಯಲಾಗುತ್ತಿದೆ.

ಇಂದಿನ ಮರ್ಯಾದೆಗೇಡು ಹತ್ಯೆಗಳಿಗೆ ಪ್ರಧಾನವಾಗಿ ಕಾರಣವಾದ ಪ್ರಮುಖಾಂಶಗಳೆಂದರೆ,

1. ಉಚ್ಚಜಾತಿ ಎಂಬ ಜಾತಿಪ್ರತಿಷ್ಠೆ.
೨. ಯಜಮಾನಿಕೆಯ ಮೇಲರಿಮೆ.
೩. ಆರ್ಥಿಕತೆಯಲ್ಲಿ ಪ್ರಾಬಲ್ಯ.
೪. ಕೆಳಜಾತಿಗಳ ಮೇಲಿನ ಕೀಳು ಭಾವನೆ.
೫. ಸಮಾಜದ ಕಟ್ಟಕಡೆಯ ವರ್ಗಗಳ ಮೇಲಿನ ದರ್ಪ ಮತ್ತು ದಬ್ಬಾಳಿಕೆ.
೬. ಮೇಲ್ಜಾತಿಯ ಕುಲಗೌರವದ ಮರ್ಯಾದೆ.
೭. ತಮಗೆ ಸರಿಸಮವಾದ ತಮ್ಮದೇ ಜಾತಿಗಳ ಜೊತೆಗಳ ವೈವಾಹಿಕ ಸಂಬಂಧ ಬೆಳೆಸುವ ಹಿತಾಸೆ.
೮. ತಮ್ಮ ಮೇಲ್ವರ್ಗದ ಜಾತಿಶ್ರೇಷ್ಠತೆಯನ್ನು ಸರ್ವವ್ಯಾಪಿ ಎತ್ತಿ ಹಿಡಿಯುವ ಹಂಬಲ.

9. ಮೇಲ್ಜಾತಿಯ ಸ್ಥಾನಮಾನ ಮತ್ತು ಗೌರವಕ್ಕೆ ಯಾರಿಂದಲೂ ಕಿಂಚಿತ್ತೂ ಧಕ್ಕೆಯಾಗದಂತೆ ಅಥವಾ ಅವಮಾನವಾಗದಂತೆ ನೋಡಿಕೊಳ್ಳುವ ಆತ್ಮಗೌರವದ ವೈಯುಕ್ತಿಕ ಪ್ರತಿಷ್ಠೆ.
10. ತಮ್ಮಗಳ ಕುಟುಂಬದ ಆಚಾರವಿಚಾರ, ರೂಢಿ-ಸಂಪ್ರದಾಯಗಳು, ಸಂಸ್ಕಾರ, ಕಟ್ಟುಪಾಡುಗಳ ಕಟ್ಟುಬದ್ಧ ಅನುಸರಣೆ ಮುಂತಾದವುಗಳು ಪ್ರಮುಖವಾದವುಗಳಾಗಿವೆ.

ಪ್ರಧಾನವಾಗಿ ಪ್ರೀತಿ, ಮಮತೆ, ಪ್ರೇಮಬಾಂಧವ್ಯ, ಸ್ನೇಹ, ವಿಶ್ವಾಸ, ವಾತ್ಸಲ್ಯ, ವೈವಾಹಿಕ ಸಂಬಂಧಗಳು, ಕಾಳಜಿ, ಕಳಕಳ ಎಂಬ ಮಾನವೀಯ ಮೌಲ್ಯಗಳು ನಿಸ್ವಾರ್ಥ ಮಾನವ ಸಂಬಂಧಗಳ ಪ್ರತೀಕ.ಇವುಗಳು ವಾಸ್ತವವಾಗಿ ಮಾನವ ಕುಲದ ಪ್ರೀತಿಆದರಗಳಿಗೆ ಅಗಾಧಶಕ್ತಿ ತಂದುಕೊಡುವ ಆಧಾರಸ್ತಂಭಗಳು.ಇದಕ್ಕೆ ಜಾತಿ, ಮತ, ಕುಲ, ಧರ್ಮಗಳ ಬೇಧವಿಲ್ಲ. ಸ್ವಾಭಾವಿಕವಾಗಿ ಯಾವುದೇ ರೀತಿಯ ಅಂತರವಿರುವುದಿಲ್ಲ. ಆದರೆ ಜಾತಿವ್ಯವಸ್ಥೆಯ ಕೊಳಕನ್ನು ಮೈಗೂಡಿಸಿಕೊಂಡಿರುವ ಜಾತಿವಾದಿ ಮನಸ್ಸುಗಳಿಂದ ಭಾರತೀಯ ಸಮಾಜದಲ್ಲಿ ಜಾತಿಸಂಕೋಲೆ ನಿರ್ಮಾಣವಾಗಿರುವುದರಿಂದ ವ್ಯಕ್ತಿವ್ಯಕ್ತಿಗಳ ನಡುವೆ ಜಾತಿಯಾಧರಿತ ಸಾಮಾಜಿಕ, ಆರ್ಥಿಕ, ರಾಜಕೀಯ, ವೈವಾಹಿಕ ಸಂಬಂಧಗಳಲ್ಲಿ ಎಂದೂ ಸರಿಪಡಿಸಲಾಗದೆ ಅಂತರ ಸೃಷ್ಟಿಯಾಗಿದೆ.

ಕುವೆಂಪುರವರು ಸಾರಿರುವ 'ಮನುಜ ಮತ ವಿಶ್ವ ಪಥ' ಎಂಬ ಮಾನವ ಸಮುದಾಯಗಳ ಜಾತಿರಹಿತ ಸಹಭಾಳ್ವೆಗೆ ಕಳಂಕಪ್ರಾಯವೆಂಬಂತೆ ಇವರ ಧ್ಯೇಯ ವಾಕ್ಯವನ್ನು ಜಾತಿವಾದಿ ಮೇಲ್ವರ್ಗಗಳು ಗಾಳಿಗೆ ತೂರಿದ್ದಾರೆ.ಜೊತೆಗೆಜಾತಿಮೀರಿ ಸಂಬಂಧಗಳನ್ನು ಬೆಸೆಯುವ ಅಂತರ್ಜಾತಿ ವೈವಾಹಿಕ ಬಾಂಧವ್ಯಗಳಿಗೆ ಕಂಟಕಪ್ರಾಯರಾಗಿದ್ದಾರೆ.ಇವರುಗಳ ಈ ಅನೀತಿಯ ವಿರುದ್ಧವಾಗಿ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ದಲಿತ ಚಳವಳಿ, ಜನಪರ ಚಳವಳಿಗಳ ಮುಂದಾಳುಗಳು ಜಾತಿವಿನಾಶಕ್ಕಾಗಿ ಅಂತರ್ಜಾತಿ ವಿವಾಹಗಳ ಕ್ರಾಂತಿಯ ಕಹಳೆಯನ್ನು ಮೊಳಗಿಸಿದ್ದರು.

- **ಜಾತಿವಿನಾಶದ ಹಿನ್ನಲೆಯಲ್ಲಿ ರಾಜ್ಯದಲ್ಲಿ ಮೊಳಗಿದ ಅಂತರ್ಜಾತಿ ವಿವಾಹಗಳ ಕ್ರಾಂತಿಕಹಳೆ:**

12ನೇ ಶತಮಾನದಲ್ಲಿ ಬಸವಣ್ಣನವರ 'ವಚನ ಚಳವಳಿ' ನೀತಿಗೆಟ್ಟ ಜಾತಿವ್ಯವಸ್ಥೆ ವಿರುದ್ಧ 'ಅಂತರ್ಜಾತಿ ವಿವಾಹ'ದ ಮೂಲಕ ಜಾತಿರಹಿತ ಸಮಸಮಾಜದ ನಿರ್ಮಾಣದ ನಿರ್ಧಾರ ಹೊಣೆಗೇಡಿ ಜಾತಿಪೀಡಕರ ಚಿತಾವಣೆಯಿಂದ ಮಣ್ಣಪಾಲದರೆ, ೨೦ನೇ ಶತಮಾನದ ಪೂರ್ವಾರ್ಧದಲ್ಲಿ ನಡೆದ ದಲಿತ ಚಳವಳಿ ದಲಿತ ಸಮುದಾಯದ ಬಿ.ಕೃಷ್ಣಪ್ಪ ಹಾಗೂ ಬ್ರಾಹಣ ಸಮುದಾಯದ ಇಂದಿರಾರವರ ನಡುವಿನ ಅಂತರ್ಜಾತಿ ವಿವಾಹದಿಂದ ಪ್ರಾರಂಭವಾಯಿತೆಂಬ ಮಾತಿದೆ.[1] ಇದು ಅಕ್ಷರಶಃ ಸತ್ಯವೂ ಕೂಡ ಆಗಿದೆ.ಇಂತಹ ಜಾತೀಯತೆಯನ್ನು ಮೀರಿನಿಲ್ಲುವ ಇವರುಗಳ ನಿರ್ಧಾರದ ಸಸಿಗೆ ನೀರೆರೆದದ್ದು ಬಸವಣ್ಣ,

ಸ್ವಾಮಿ ದಯಾನಂದ ಸರಸ್ವತಿ,ಗಾಂಧೀಜಿ, ಬಿ.ಆರ್.ಅಂಬೇಡ್ಕರ್, ಬಾಬೂ ಜಗಜೀವನ ರಾಂ, ರಾಮಮನೋಹರ ಲೋಹಿಯಾ ಹಾಗೂ ಮುಂತಾದ ಸಮಾಜ ಸುಧಾರಕರುಗಳ ಪ್ರಗತಿಪರ ತತ್ವ, ಚಿಂತನೆ, ವಿಚಾರಧಾರೆಗಳೇ ಆಗಿವೆ. ಇವರುಗಳು ಜಾತೀಯತೆ ಎಂಬ ವಿಷವ್ಯೂಹದ ಸೋಂಕನ್ನು ಸಂಪೂರ್ಣವಾಗಿ ನಿರ್ನಾಮ ಮಾಡಲು 'ಅಂತರ್ಜಾತಿ ವಿವಾಹ'ವೇ ಪರ್ಯಾಯ ಮಾರ್ಗ ಎಂಬುದಾಗಿ ಪ್ರತಿಪಾದಿಸಿದ್ದರು.

ಇವರುಗಳ ಈ ಆದರ್ಶಪ್ರಾಯ ಸಿದ್ಧಾಂತಗಳನ್ನು ಚಾಲನೆಗೆ ತರಲು 1970ರ ದಶಕದಲ್ಲಿ ಪ್ರವರ್ಧಮಾನದಲ್ಲಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನೇತೃತ್ವದ ದಲಿತ ಚಳವಳಿಯ ಪ್ರವರ್ತಕರು ಮುಂದಾಗಿದ್ದರು. ಇವರ ಜೊತೆಗೆ ರೈತಸಂಘದ ಮುಂದಾಳುಗಳು, ಎಡಪಂಥೀಯರು ಹಾಗೂ ಪ್ರಗತಿಪರ ಚಿಂತಕರು ಮತ್ತು ಹೋರಾಟಗಾರರುಗಳು, ದಲಿತ ಸಮುದಾಯದ ಸರ್ಕಾರಿ ನೌಕರರು ತೀವ್ರತರವಾಗಿ ಅಂತರ್ಜಾತಿ ವಿವಾಹಗಳ ಕ್ರಾಂತಿಯನ್ನೇ ಮಾಡಿದರು. ಸ್ವತಃ ಇವರುಗಳೇ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಅಂತರ್ಜಾತಿ ವಿವಾಹಗಳನ್ನು ಮಾಡಿಕೊಂಡರಲ್ಲದೆ, ಪರಸ್ಪರ ಪ್ರೇಮಿಸಿ ಅಂತರ್ಜಾತಿ ವಿವಾಹವಾಗಲು ಮುಂದಾದ ಅನ್ಯಜಾತಿಯ ಪ್ರೇಮಿಗಳನ್ನು ಪ್ರೋತ್ಸಾಹಿಸಿ ಕಾನೂನು ರಕ್ಷಣೆಯಲ್ಲಿ ವಿವಾಹ ಮಾಡಿಸಿದ್ದಾರೆ.

ಅಂತಹವರಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕ.ದ.ಸಂ.ಸ) ಯ ಬಿ.ಕೃಷ್ಣಪ್ಪ (ದಲಿತ ಸಂಘರ್ಷ ಸಮಿತಿಯ ಸ್ಥಾಪಕರು, ಭದ್ರಾವತಿ, ಶಿವಮೊಗ್ಗ), ಕೋಟಗಾನಹಳ್ಳಿ ರಾಮಯ್ಯ (ದಲಿತ ಕವಿಗಳು ಮತ್ತು ಪ್ರಗತಿಪರರು, ಆದಿಮ ಸಂಸ್ಥೆಯ ಸ್ಥಾಪಕರು, ಕೋಲಾರ), ಹೆಚ್.ಗೋವಿಂದಯ್ಯ (ದಲಿತ ಬರಹಗಾರರು ಮತ್ತು ಹೋರಾಟಗಾರರು, ಮಾಜಿ ಕೆ.ಪಿ.ಎಸ್.ಸಿ ಸದಸ್ಯರು), ಸಿದ್ದಲಿಂಗಯ್ಯ (ದಲಿತ ಕವಿಗಳು ಹಾಗೂ ಮಾಜಿ ವಿಧಾನಪರಿಷತ್ ಸದಸ್ಯರು), ಡಿ.ಎಂ.ತಿಮ್ಮರಾಯಪ್ಪ(ದಲಿತ ಕ್ರಿಯಾ ಸಮಿತಿ ಸ್ಥಾಪಕರು), ಎ.ಸಿ.ರುದ್ರಪ್ಪ, ಸಿ. ಮುನಿಯಪ್ಪ, (ಕ.ದ.ಸಂ.ಸ.), ಕೆ.ಬಿ. ಸಿದ್ದಯ್ಯ (ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, ಮಂಡ್ಯ), ಜನಾರ್ಧನ್ (ಜನ್ನಿ) (ಕ.ದ.ಸಂ.ಸ.ದ ಕಲಾಮಂಡಳಿಯ ಕಲಾವಿದರು ಹಾಗೂ ಮಾಜಿ ನಿರ್ದೇಶಕರು, ರಂಗಾಯಣ, ಮೈಸೂರು), ಎಂ.ವೆಂಕಟಸ್ವಾಮಿ (ರಾಜ್ಯಾಧ್ಯಕ್ಷರು, ರಾಜ್ಯ ಸಮತಾ ಸೈನಿಕ ದಳ, ಬೆಂಗಳೂರು), ಗುರುರಾಜ ಬೇಡಿಕರ್ (ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು), ಕೆ.ರಾಮದಾಸ್ (ಪ್ರಗತಿಪರರು ಹಾಗೂ ಹೋರಾಟಗಾರರು), ಪೂರ್ಣಚಂದ್ರ ತೇಜಸ್ವಿ (ಪ್ರಗತಿಪರ ಚಿಂತಕರು ಮತ್ತು ಕವಿಗಳು), ಯು.ಆರ್.ಅನಂತಮೂರ್ತಿ (ಪ್ರಗತಿಪರ ಚಿಂತಕರು ಮತ್ತು ಕವಿಗಳು), ಕೆ.ಟಿ.ಶಿವಪ್ರಸಾದ್ (ಅಂತರರಾಷ್ಟ್ರೀಯ ಮಟ್ಟದ ಚಿತ್ರ ಕಲಾವಿದರು, ಪ್ರಗತಿಪರರು ಹಾಗೂ ದಲಿತ–ರೈತಪರ ಹೋರಾಟಗಾರರು), ಎಸ್. ತುಕಾರಾಂ (ನಿರ್ದೇಶಕರು, ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು), ಲಕ್ಷ್ಮಣ್ ಹೊಸಕೋಟೆ (ಜೀವ ವಿಮಾ ನಿಗಮ ಅಧಿಕಾರಿಗಳು, ಮೈಸೂರು), ರಾಜೇಂದ್ರಸಿಂಗ್

ಮುಂತಾದವರು.[2]ಇವರೆಲ್ಲರುಗಳ ಪ್ರಭಾವದಿಂದ ಮೈಸೂರಿನಲ್ಲಿ ಸರಸ್ವತಿಪುರಂನ ವಿಶ್ವಮಾನವ ಡಬಲ್ ರಸ್ತೆಯಲ್ಲಿರುವ 'ಮಾನವ ಮಂಟಪ' ಎಂಬ ಸಂಸ್ಥೆಯು ಇಂದೂ ಕೂಡ ಕಾನೂನು ಭದ್ರತೆಯ ಅಡಿ ಅಂತರ್ಜಾತಿ ವಿವಾಹ ಪ್ರಕ್ರಿಯೆಯಲ್ಲಿ ತೊಡಗಿದೆ.[3]

ಆದರೆ ಈ ತೆರನಾದ ಅಂತರ್ಜಾತಿ ವಿವಾಹಗಳು ಕೇವಲ ನಗರ ಪ್ರದೇಶಗಳಲ್ಲಿ ಸರ್ಕಾರಿ ನೌಕರಿಯಲ್ಲಿದ್ದವರು, ಚಳವಳಿಯ ಹಿನ್ನಲೆಯಲ್ಲಿ ಗುರುತಿಸಿಕೊಂಡಿದ್ದ ಹೋರಾಟಗಾರರು ಹಾಗೂ ಆರ್ಥಿಕವಾಗಿ ಸಬಲವಾಗಿದ್ದ ಪ್ರಗತಿಪರ ಮನಸ್ಸುಗಳಿಗೆ ಮಾತ್ರ ಸೀಮಿತವಾಗಿದೆ.ಆದರೆಹಳ್ಳಿಗಾಡಿನಲ್ಲಿ ಇಂತಹ ವಿವಾಹಗಳಿಗೆ ಅವಕಾಶವೇ ಇಲ್ಲದಂತಾಗಿತ್ತು. ಏಕೆಂದರೆ ಮೇಲ್ಜಾತಿಯ ಪ್ರಬಲ ಜಾತಿವಾದಿಗಳು ಅಂತರ್ಜಾತಿವಿವಾಹದ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳ್ಳಲು ಬಿಡಲಿಲ್ಲ. ಕಾರಣ ತಮ್ಮ ಕುಟುಂಬದ ಯಾವ ಸದಸ್ಯರಿಂದಲೇ ಆಗಲಿ ತಮ್ಮ ಕುಲಮರ್ಯಾದೆಗೆ ಅವಮಾನ ಆಗುವ ರೀತಿಯಲ್ಲಿ ಕೆಳಜಾತಿಯ ಹುಡುಗ ಅಥವಾ ಹುಡುಗಿಯ ಜೊತೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಿದರೆ ಅಂತಹವರನ್ನು ಸಂಚುಮಾಡಿ ತಮ್ಮ ಕುಟುಂಬದ ಮರ್ಯಾದೆಯನ್ನು ಬೀದಿಪಾಲು ಮಾಡಿದರಲ್ಲಾ ಎಂಬ ಸಿಟ್ಟಿನಿಂದ ಮರ್ಯಾದೆಗೇಡು ಹತ್ಯೆಗೈಯ್ಯಲು ಮುಂದಾಗುತ್ತಿದ್ದರು ಮತ್ತು ಮುಂದಾಗುತ್ತಿದ್ದಾರೆ. ಆದರೆ ಇವರುಗಳು ಈ ದುಡುಕಿನ ನಿರ್ಧಾರದಿಂದ ತಮ್ಮ ಕುಟುಂಬದ ಮಾನಮರ್ಯಾದೆ ಸಾರ್ವಜನಿಕವಾಗಿ ಹರಾಜಾಗಿ ನ್ಯಾಯಾಲಯದ ಕಟಕಟ್ಟೆಯನ್ನು ಹತ್ತುವುದರ ಬಗ್ಗೆ ಸ್ವಲ್ಪವೂ ಯೋಚಿಸದೆ ಮುಗ್ಗರಿಸುತ್ತಿರುವುದು ನಿಜಕ್ಕೂ ದುರಂತ.ಅದರೂ ಇದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದ ಕೆಲವುಜಾತಿವಾದಿ ಪೋಷಕರು ಮತ್ತು ಅವರ ಸಂಬಂಧಿಗಳು ಅಂತರ್ಜಾತಿ ವಿವಾಹವಾದ ಅಥವಾ ಓಡಿಹೋಗಿ ವಿವಾಹವಾಗಲು ಪ್ರಯತ್ನಿಸಿದ ಮುಗ್ಧ ಜೋಡಿಗಳಪ್ರಾಣವನ್ನು ತೆಗೆದು ಮರ್ಯಾದೆಗೇಡು ಹತ್ಯೆಗಳಿಗೆ ಕಾರಣರಾಗುತ್ತಿದ್ದಾರೆ.ಇವರ ದೃಷ್ಟಿಯಲ್ಲಿ ತಮ್ಮ ಹೆಣ್ಣು ಅಥವಾ ಗಂಡು ಮಕ್ಕಳು ಅಂತರ್ಜಾತಿ ವಿವಾಹವಾಗುವುದು ಮಹಾಪಾಪ ಎಂಬುದು ತಲೆಗಂಟಿದೆ. ಹೀಗಾಗಿಇವರು ಇಂತಹ ಮದುವೆಯಾದ ತಮ್ಮ ಮಕ್ಕಳನ್ನು ಮರ್ಯಾದೆಗೇಡು ಎಂಬೆಸರಿನಲ್ಲಿ ಹತ್ಯೆ ಮಾಡುತ್ತಿರುವುದು ತಮ್ಮ ಕುಲಕ್ಕಾದ ಅವಮಾನ ಮತ್ತು ಮಾಡುತ್ತಿರುವ ಮಹಾ ಅಪರಾಧಯುಕ್ತ ಪ್ರಮಾದ ಎಂಬುದನ್ನು ಮರೆತಂತಿದೆ.

- **ಕರ್ನಾಟಕದಲ್ಲಿ ಜಾತಿವಾದಿ ಪೋಷಕರುಗಳಿಂದ ನಡೆದ ಮರ್ಯಾದೆಗೇಡು ಹತ್ಯೆಗಳು**:

ಇಂತಹ ಮರ್ಯಾದೆಗೇಡು ಹತ್ಯಾಕಾಂಡಗಳು ದೇಶವ್ಯಾಪಿ ಬಲೆಯಂತೆ ಹರಡಿಕೊಂಡಿವೆ. ದೇಶದ ಯಾವ ರಾಜ್ಯಗಳು ಈ ಬಾಧೆಗಳಿಂದ ಮುಕ್ತವಾಗಿಲ್ಲ. ಆದರೆ ಇಂತಹ ಹತ್ಯೆಗಳು ಕರ್ನಾಟಕದಲ್ಲಿ

ಮನಕಲಕುವ ರೀತಿಯಲ್ಲಿ ನಡೆಯುತ್ತಲೇ ಇವೆ.ಆರಂಭದಲ್ಲಿ ಅಂದರೆ ೮೦–೯೦ರ ದಶಕದ ಪೂರ್ವಮತ್ತು ನಂತರದಲ್ಲಿ ಅಂತರ್ಜಾತಿ ಪ್ರೇಮವಿವಾಹಗಳಿಗೆ ಪ್ರಯತ್ನಿಸಿದ ಅಥವಾ ವಿವಾಹವಾದ ಪ್ರೇಮಿಗಳಲ್ಲಿ ಪ್ರತ್ಯೇಕವಾಗಿ ಕೆಳಜಾತಿಯ ಯುವಕ ಅಥವಾ ಯುವತಿಯರ ಹತ್ಯೆಗಳೇ ಅಧಿಕವಾಗಿರುತ್ತಿದ್ದವು. ಆದರೆ ಈ ಹತ್ಯೆಗಳು ಅಂದು ಮರ್ಯಾದೆಗೇಡು ಹತ್ಯೆಗಳೆಂದು ಸಾರ್ವಜನಿಕವಾಗಿ ಪರಿಗಣಿತವಾಗಿರಲಿಲ್ಲ. ಇವುಗಳು ಕೇವಲ ಮೇಲ್ಜಾತಿಗಳ ಕೆಳಜಾತಿಗಳ ಮೇಲಿನ ಜಾತೀಯತೆಯ ಕ್ರೌರ್ಯಕ್ಕೆ ಸಾಕ್ಷಿಯಾಗಿದ್ದವು.

ಇದಕ್ಕೆ ಸ್ಪಷ್ಟ ನಿದರ್ಶನವಾಗಿ ಈ ಘಟನೆಗಳನ್ನು ಉದಾಹರಿಸಬಹುದು.ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಹೊಸಹಳ್ಳಿಯಲ್ಲಿ ದಲಿತ ಸಮುದಾಯದ ಲಕ್ಷ್ಮಯ್ಯ ಹಾಗೂ ಇದೇ ಹಳ್ಳಿಯ ಒಕ್ಕಲಿಗರ ಸಿದ್ದೇಗೌಡರ ಮಗಳಾದ ಮಾದೇವಿಯವರು ಪರಸ್ಪರ ಪ್ರೇಮಿಸುತ್ತಿದ್ದರು. ಈ ವಿಚಾರ ಮಾದೇವಿಯ ತಂದೆಗೆ ತಿಳಿದು ತನ್ನ ಕುಟುಂಬ ಹಾಗೂ ಸಂಬಂಧಿಕರ ನೆರವಿನಿಂದ ೮ ಆಗಸ್ಟ್, 197೮ರಲ್ಲಿ ಲಕ್ಷ್ಮಯ್ಯನು ಆತನ ಸ್ನೇಹಿತರ ಜೊತೆ ಕೆ.ಆರ್.ನಗರದಿಂದ ಸಿನಿಮಾ ನೋಡಿ ಹಿಂತಿರುಗುತ್ತಿದ್ದ ಸಮಯದಲ್ಲಿ ಈತನ ಮೇಲೆ ದಾಳಿ ಮಾಡಿ ಅಮಾನುಷವಾಗಿ ಕೊಲೆ ಮಾಡಿದ್ದರು.[4]ಹಾಗೆಯೇ ಬೆಂಗಳೂರಿನ ಹೆಬ್ಬಾಳ ಗ್ರಾಮದಲ್ಲಿ ಹರಿಜನ ಹುಡುಗ ಮುನಿರಾಜು ಮತ್ತು ಅದೇ ಗ್ರಾಮದ ರೆಡ್ಡಿ ಜನಾಂಗದ ಸುಶೀಲಮ್ಮಳಿಗೂ ಪ್ರೇಮಾಂಕುರವಾಗಿ 19೮4ರ ಸಮಯದಲ್ಲಿ ರೆಡ್ಡಿ ಜನಾಂಗದ ವಿರೋಧ ಕಟ್ಟಿಕೊಂಡು ಅಂತರ್ಜಾತಿ ವಿವಾಹವಾಗಿದ್ದರು. ಇವರ ವಿವಾಹವಾಗಿ 4 ವರ್ಷ ಕಳೆದ ನಂತರ ಈಕೆಯ ಅಣ್ಣ ಕೃಷ್ಣಾರೆಡ್ಡಿಯು 12 ಆಗಸ್ಟ್, 19೮೮ರಲ್ಲಿ ತನ್ನ ಸಹಚರರೊಂದಿಗೆ ಸೇರಿ ಮುನಿರಾಜುವನ್ನು ಮಚ್ಚಿನಿಂದ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿದ್ದರು.[5]ಇದೇ ರೀತಿಯಲ್ಲಿಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಬರಗೇನಹಳ್ಳಿಯಲ್ಲಿ ದಲಿತ ಕುಟುಂಬಕ್ಕೆ ಸೇರಿದ ಬಿ.ಟಿ. ಮಲ್ಲೇಶ ಮತ್ತು ಇದೇ ಗ್ರಾಮದಲ್ಲಿ ಒಕ್ಕಲಿಗ ಜಾತಿಗೆ ಸೇರಿದ ಶಿವಮ್ಮ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಜೊತೆಗೆ ಮದುವೆಯಾಗಲು ನಿರ್ಧರಿಸಿದ್ದರು. ಇದನ್ನು ತಿಳಿದ ಶಿವಮ್ಮಳ ತಂದೆ ಕೆಳಜಾತಿ ಸುಡುಗಾಡುಸಿದ್ದರ ಹುಡುಗನೊಬ್ಬ ಒಕ್ಕಲಿಗ ಸಮುದಾಯದ ಹುಡುಗಿಯನ್ನು ಮದುವೆಯಾಗುವಷ್ಟರ ಮಟ್ಟಿಗೆ ಬೆಳೆದಿದ್ದಾನೆಂಬಆಕ್ರೋಶದಿಂದ ತನ್ನ ಸಂಬಂಧಿಗಳನ್ನು ಜೊತೆಗೂಡಿಸಿ ಈತನನ್ನು ಶಿವಮ್ಮಳನ್ನು ಕೊಟ್ಟು ನಿನಗೆ ಮದುವೆ ಮಾಡುತ್ತೇವೆಂದು ಪುಸಲಾಯಿಸಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಗೆ ಕರೆದೊಯ್ದು ಅಲ್ಲಿನ ವೈರಮುಡಿ ದೇವಸ್ಥಾನದ ಬಳಿ 1 ಏಪ್ರಿಲ್, 19೮9ರಲ್ಲಿ ಹತ್ಯೆ ಮಾಡಿದ್ದರು.[6]

ಮತ್ತೆ ಕೆಲವು ಸಂದರ್ಭಗಳಲ್ಲಿ ಈ ತೆರನಾದ ಕೃತ್ಯಗಳು ಅನ್ಯಧರ್ಮೀಯವಾಗಿ ಪರಸ್ಪರ ಪ್ರೀತಿಸಿ ತಮ್ಮ ಕುಟುಂಬಗಳ ವಿರೋಧ ಕಟ್ಟಿಕೊಂಡು ಓಡಿಹೋಗಿ ವಿವಾಹ ಮಾಡಿಕೊಂಡಿದ್ದಯುವಕಯುವತಿಯರಿಬ್ಬರ ಮೇಲೂ ನಡೆದಿವೆ. ಮದುವೆಯಾಗಿ ಒಂದೆರಡು ಅಥವಾ

ಮೂರ್‍ನಾಲ್ಕು ವರ್ಷಗಳ ನಂತರ ಕಂಡುಬಂದ ಈ ಜೋಡಿಗಳ ಮೇಲೆ ಹುಡುಗಿಯ ಕುಟುಂಬದವರಿಂದಲೇ ನಡೆದಿರುವ ಮಾರಣಹೋಮ ಕಲ್ಪನೆಗೆ ನಿಲುಕದ್ದಾಗಿದೆ.ಇದಕ್ಕೆ ಸ್ಪಷ್ಟ ನಿದರ್ಶನವೆಂದರೆ, ೯೦ರ ದಶಕದಲ್ಲಿ ಹುಬ್ಬಳ್ಳಿಯಲ್ಲಿ ಕ್ರಿಶ್ಚಿಯನ್ ಸಮುದಾಯದ ಜೋಸೆಫ್ ಹಾಗೂ ಮುಸ್ಲೀಂ ಧರ್ಮದ ರುಕ್ಸಾನಾ ಎಂಬ ಅನ್ಯಧರ್ಮೀಯ ದಂಪತಿಗಳಿಬ್ಬರ ಮೇಲೆ ನಡೆದ ಜೋಡಿಕೊಲೆ ಪ್ರಕರಣ.ಇಲ್ಲಿ ಈ ಎರಡೂ ಕೋಮಿನ ಜೋಸೆಫ್ ಮತ್ತು ರುಕ್ಸಾನಾರ ನಡುವೆ ಪ್ರೀತಿಯ ಬೆಸುಗೆ ಗಟ್ಟಿಯಾಗಿತ್ತು.ಇವರ ಪ್ರೀತಿಯ ವಿಚಾರ ಹುಡುಗಿಯ ಮನೆಯವರಿಗೆ ಗೊತ್ತಾಗಿ ಈ ಹುಡುಗನನ್ನು ಕೊಲೆ ಮಾಡಲು ಯೋಜನೆ ರೂಪಿಸಿದ್ದರು.ಇದು ರುಕ್ಸಾನಾಗೆ ತಿಳಿದು ಮುಂದಾಗುವ ಅನಾಹುತವನ್ನು ತಪ್ಪಿಸಲು ಇಬ್ಬರೂ ನಿರ್ಧರಿಸಿ ಮನೆಬಿಟ್ಟು ಓಡಿಹೋಗಿ ಮದುವೆಯಾಗಿದ್ದರು.ಮದುವೆಯಾದ 2 ವರ್ಷಗಳ ನಂತರ ತಮ್ಮ ಮಗುವಿನೊಂದಿಗೆ ಹುಬ್ಬಳ್ಳಿಯ ಒಂದು ಸ್ಥಳದಲ್ಲಿ ವಾಸಮಾಡುತ್ತಿದ್ದರು. ಇದನ್ನು ತಿಳಿದ ರುಕ್ಸಾನಾಳ ತಂದೆ ಮತ್ತು ಅಣ್ಣ ಬೇರೊಂದು ಧರ್ಮದ ಹುಡುಗನನ್ನು ವರಿಸಿ ನಮ್ಮ ಧರ್ಮಕ್ಕೆ ಅವಮಾನ ಮಾಡಿ ಮನೆತನದ ಗೌರವ, ಮಾನಮರ್ಯಾದೆಯನ್ನು ಬೀದಿಪಾಲು ಮಾಡಿದಳು ಎಂದು ಆಕ್ರೋಶಗೊಂಡು ತನ್ನ ಸಹಚರರ ಜೊತೆ ಆಕೆಯ ಮನೆಯ ಮೇಲೆ ದಾಳಿ ಮಾಡಿ ಅಮಾನುಷವಾಗಿ ಇಬ್ಬರನ್ನು ಕೊಲೆ(ಆಧಾರ– ಈ ಹತ್ಯೆಯ ನೈಜ ಘಟನೆಯಾಧರಿತ ಕನ್ನಡ ಸಿನಿಮಾ 'ಅಭಿ, 2003)ಮಾಡಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಎಂಬ ಸ್ಥಳದಲ್ಲಿ ಅದೇ ಊರಿನ ಬ್ರಾಹ್ಮಣ ಹುಡುಗಿ ಸೌಮ್ಯ ಎಂಬಾಕೆಯ ಕೊಲೆಯಾಗಿತ್ತು. ಈಕೆ ಮತ್ತು ಮುಸ್ಲೀಂ ಸಮುದಾಯದ ಆಶ್ರಫ್ ಎಂಬ ಯುವಕನ ನಡುವೆ ಪ್ರೇಮಾಂಕುರವಾಗಿದ್ದೇ ಈ ಕೊಲೆಗೆ ಕಾರಣವಾಗಿತ್ತು.ಈ ಕೊಲೆಯನ್ನು ಸೌಮ್ಯಾಳ ಪೋಷಕರೇ ತಮ್ಮ ಕುಲಗೌರವಕ್ಕಾಗಿ ಮಾಡಿದ್ದರು.[7]ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ತಾಮಸಂದ್ರ ಗ್ರಾಮದಲ್ಲಿ ಮೇಲ್ಜಾತಿಯ ಕೆ.ಆರ್.ದೀಪಿಕಾ ಎಂಬಾಕೆ ಕೆಳಜಾತಿಯ ಹುಡುಗನನ್ನು ಪ್ರೀತಿಸಿ ಇಬ್ಬರೂ ತಮ್ಮ ಕುಟುಂಬಗಳ ವಿರೋಧ ಕಟ್ಟಿಕೊಂಡು ಓಡಿಹೋಗಿ 2009ರ ಸಮಯದಲ್ಲಿ ಅಂತರ್ಜಾತಿ ವಿವಾಹವಾಗಿದ್ದರು. ಒಂದೆರಡು ವರ್ಷಗಳ ನಂತರ ಇವರಿಬ್ಬರು ವಾಸವಿದ್ದ ಸ್ಥಳವನ್ನು ತಿಳಿದ ದೀಪಿಕಾಳ ಕುಟುಂಬದವರು 26 ಫೆಬ್ರವರಿ, 2011ರಲ್ಲಿಹಠಾತ್ ದಾಳಿ ಮಾಡಿ ದೀಪಿಕಾ ಮತ್ತು ಈಕೆಯ 4 ತಿಂಗಳ ಹಸುಗೂಸನ್ನು ಹತ್ಯೆಗೈದಿದ್ದರು.[8]

ಹೀಗೆ ಜಾತಿವಾದಿ ಪೋಷಕರಿಂದಲೇ ನಡೆದ ಮುಗ್ಧಜೀವಗಳ ಮೇಲಿನ ಅಮಾನುಷವಾದ ಕೊಲೆಗಳು ಮಾನವ ಕುಲದ ಸಹೃದಯ ಸಂಬಂಧಗಳಿಗೆ ಅಂಟಿದ ಜಾತಿಜಾಡ್ಯತೆ ಹಾಗೂ ಕೋಮುದ್ವೇಷದ ಬೆಂಕಿಯ ಜ್ವಾಲೆಗಳಾದವು.ಇವುಗಳು ಕಾಲಕ್ರಮೇಣವಾಗಿ ಕೆಳಜಾತಿಯ ಯುವಕನನ್ನು ಅಂತರ್ಜಾತಿ ವಿವಾಹದ ರೂಪದಲ್ಲಿ ವರಿಸಿದ ಮೇಲ್ಜಾತಿ ಹೆಣ್ಣುಮಗಳ ಜೀವನವನ್ನು ಕ್ರೂರವಾಗಿ ಬಲಿ ಪಡೆಯುವ

ಮರ್ಯಾದೆಗೇಡು ಹತ್ಯೆಗಳಾಗಿ ಮಾರ್ಪಟ್ಟವು.ಇಂತಹ ಘನಘೋರ ಹತ್ಯಾಕಾಂಡಗಳು ರಾಜ್ಯದ ಬಹುಭಾಗಗಳಲ್ಲಿ ಘಟಿಸಿದವು.ಅವುಗಳಲ್ಲಿ ಮಂಡ್ಯ, ಮೈಸೂರು, ಬೆಂಗಳೂರು, ರಾಮನಗರ, ಧಾರವಾಡ, ಚಿಕ್ಕಮಗಳೂರು, ಹಾಸನ ಇನ್ನು ಮುಂತಾದ ಜಿಲ್ಲೆಗಳು ಪ್ರಮುಖವಾದವುಗಳು.

21ನೇ ಶತಮಾನದ ಉತ್ತರಾರ್ಧದಲ್ಲಿ ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ ನಡೆದ ಸುವರ್ಣಾ ಎಂಬ ಮೇಲ್ಜಾತಿ ಹೆಣ್ಣುಮಕ್ಕಳು ತನ್ನ ಪೋಷಕರಿಂದಲೇಕೊಲೆಯಾದ ಪ್ರಕರಣ ಮಾಧ್ಯಮದ ಮೂಲಕ ಬಿತ್ತರಗೊಂಡ ತಕ್ಷಣದಿಂದರಾಜ್ಯದಲ್ಲಿ 'ಮರ್ಯಾದೆಗೇಡು ಹತ್ಯೆ' ಎಂಬ ಪದ ಪರಿಚಯವಾಯಿತು.ಇಂತಹ ಇಡೀ ಮಾನವಕುಲವೇ ತಲೆತಗ್ಗಿಸುವಂತಹ ಭೀಬತ್ಸ ಕೃತ್ಯವನ್ನು ಕೆಳಕಂಡಂತೆ ತಿಳಿದುಕೊಳ್ಳಬಹುದು.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯಲ್ಲಿ ಆಬಲವಾಡಿ ಗ್ರಾಮವಿದೆ.6ನವೆಂಬರ್, 2011ರಲ್ಲಿ ಒಕ್ಕಲಿಗ ಜನಾಂಗದ ಸುವರ್ಣಾ ಎಂಬಾಕೆಯ ಮರ್ಯಾದಾ ಹತ್ಯೆಯಾಗಿತ್ತು.ಇದಕ್ಕೆ ಪ್ರಮುಖ ಕಾರಣ ಈಕೆ ಮಾದಿಗ ಸಮುದಾಯದ ಹುಡುಗ ಗೋವಿಂದರಾಜು ಎಂಬಾತನನ್ನು ಪ್ರೀತಿಸಿ ಮದುವೆಯಾಗಲು ಪ್ರಯತ್ನಿಸಿದ್ದುದೇ ಆಗಿತ್ತು.[9] ಆಗ ನಮ್ಮ ಕುಲ, ಜಾತಿ, ಮನೆತನಕ್ಕೆ ಅಸ್ಪೃಶ್ಯ ಜಾತಿಯವನ ಜೊತೆ ಪ್ರೀತಿ ಮಾಡಿ ಅಪಚಾರ ಮಾಡಿದ್ದಳೆಂಬ ಕೋಪದಿಂದ ಸುವರ್ಣಾಳನ್ನು ಗೋವಿಂದರಾಜನ ಮನೆಯ ಹಾಲ್‌ನ ದೊಡ್ಡ ತೊಲೆಗೆ ನೇಣು ಬಿಗಿದು ಹತ್ಯೆ ಮಾಡಿ ಅದೇ ದಿನ ರಾತ್ರಿ ಮೃತದೇಹವನ್ನು ಗುರುತು ಸಿಗದಂತೆ ಸುಟ್ಟು ಹಾಕಿದರು. ಇದೇ ಸಂದರ್ಭದಲ್ಲಿ ಗೋವಿಂದರಾಜು ಇವರ ಹತ್ಯೆಯ ಸಂಚಿನಿಂದ ಪಾರಾಗಿ ತಪ್ಪಿಸಿಕೊಂಡಿದ್ದನು. ಇದಾದ 2 ತಿಂಗಳ ನಂತರ ಅಂದರೆ 6ಜನವರಿ, 2012ರಂದು ಗೋವಿಂದರಾಜುವಿನ ಸಹೋದರ ತಿಮ್ಮಪ್ಪ ಎಂಬಾತ ಭಯಭೀತನಾಗಿ ತನ್ನ ಕುಟುಂಬದ ಸದಸ್ಯರ ಪ್ರಾಣರಕ್ಷಣೆಗಾಗಿ ಮದ್ದೂರು ತಾಲ್ಲೂಕಿನ ಕೊಪ್ಪ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಮೇಲೆ ಈ ಪ್ರಕರಣ ರಾಜ್ಯದಾದ್ಯಂತ ಮರ್ಯಾದೆಗೇಡು ಹತ್ಯೆ ಎಂಬೆಸರಿನಲ್ಲಿ ಸುದ್ಧಿಯಾಯಿತು.[10]

ಈ ಘಟನೆಯಾದ ಎರಡೇ ತಿಂಗಳಲ್ಲಿ ಮೇಲ್ವರ್ಗದ ಜಾತಿಬುರುಕರಿಂದ ಸ್ಮೃತಿ ಎಂಬಾಕೆಯ ಮರ್ಯಾದೆಗೇಡು ಹತ್ಯೆಯಾಯಿತು.ಕರ್ನಾಟಕ ಲೋಕಸೇವಾ ಆಯೋಗದಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಆಯ್ಕೆಗೊಂಡು ಚಾಮರಾಜನಗರ ಜಿಲ್ಲೆಯ ಕೇಂದ್ರಭಾಗದಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರು.ಈ ಸಂದರ್ಭದಲ್ಲಿ ಈಕೆ ದಲಿತ ವರ್ಗದ ಹುಡುಗನನ್ನು ಪ್ರೀತಿಸಿ ತನ್ನ ಬಾಳಸಂಗಾತಿಯನ್ನಾಗಿಸಿಕೊಳ್ಳಲು ನಿಶ್ಚಯಿಸಿದ್ದೇ ಸ್ಮೃತಿಯ ಹತ್ಯೆಗೆ ಕಾರಣವಾಗಿತ್ತು. ಈಕೆಯ ಸಹೋದರನೇ ಜಾತಿಯ ನಂಜನ್ನು ಕಾರಿ ಸ್ಮೃತಿಯ ಗೌರವಯುತವಾದ ಸ್ವಾಭಿಮಾನದ ಬದುಕಿಗೆ ಕೊಳ್ಳಿ ಇಡುವುದರ ಆಕೆಯ ಜೀವವನ್ನೇ ತೆಗೆದರು.[11]

ಬೆಂಗಳೂರು ಜಿಲ್ಲೆಯ ಆನೇಕಲ್ ಬಳಿ ದಲಿತ ಸಮುದಾಯಕ್ಕೆ ಸೇರಿದ ನವೀನ್‌ಕುಮಾರ್ ಎಂಬಾತನನ್ನು 6 ಸೆಪ್ಟೆಂಬರ್, 2012ರಂದು ಮೇಲ್ಜಾತಿಯ ಕೊಲೆಪಾತಕರು ಘನಘೋರವಾಗಿ ಹತ್ಯೆ ಮಾಡಿದ್ದರು.ಇದಕ್ಕೆ ಬಹುಮುಖ್ಯ ಕಾರಣ, ಈತ ಮತ್ತು ಮೇಲ್ವರ್ಗದ ಹುಡುಗಿ ಇಬ್ಬರೂ ಒಬ್ಬರನ್ನೊಬ್ಬರು ಪ್ರೇಮಿಸಿ ಮದುವೆಯಾಗಲು ಪ್ರಯತ್ನ ಮಾಡಿದ್ದರಿಂದ ಈ ಘಟನೆ ಸಂಭವಿಸಿತ್ತು. ಹಾಗೆಯೇ ಹಾಸನ ಜಿಲ್ಲೆಯಲ್ಲಿ ಮುಸ್ಲೀಂ ಸಮುದಾಯದ ಹೆಣ್ಣು ಮಗಳೊಬ್ಬಳು ತನ್ನ ಸಂಬಂಧಿಕರಿಂದಲೇ 6 ನವೆಂಬರ್, 2012ರಂದು ಕೊಲೆಯಾಗಿದ್ದಳು. ಈಕೆ ಬೇರೊಂದು ಜಾತಿಯ ಹುಡುಗನನ್ನು ಪ್ರೀತಿಸುತ್ತಿದ್ದುದೇ ಈ ಪ್ರಕರಣಕ್ಕೆ ಕಾರಣವಾಗಿತ್ತು.ಮೈಸೂರು ಜಿಲ್ಲೆಗೆ ಸೇರಿದ ಶಿಲ್ಪಾ ಎಂಬ ಮೇಲ್ವರ್ಗದ ಯುವತಿ ಮಂಡ್ಯ ಜಿಲ್ಲೆಯ ದಲಿತ ಹುಡುಗನನ್ನು ಪ್ರೇಮಿಸಿ ಮದುವೆಯಾಗಲು ಇಬ್ಬರೂ ಪ್ರಯತ್ನಿಸಿದ್ದರು.ಇದನ್ನು ಸಹಿಸದ ಈಕೆಯ ಕುಟುಂಬವೂ ತಮ್ಮ ಮರ್ಯಾದೆಗೆ ಅಂಜಿ 12 ಏಪ್ರಿಲ್, 2014ರಂದು ಶಿಲ್ಪಾಳನ್ನು ಮಂಡ್ಯ ಜಿಲ್ಲೆಯಲ್ಲಿ ಹತ್ಯೆ ಮಾಡಿದ್ದರು.ಧಾರವಾಡ ಜಿಲ್ಲೆಯ ಶಿವಳ್ಳಿ ಎಂಬ ಹಳ್ಳಿಯಲ್ಲಿ ಮೇಲ್ಜಾತಿ ಹುಡುಗಿ ಮತ್ತು ದಲಿತ ವರ್ಗದ ಮಹೇಶ್ ನಾಲ್ಕರ್ ಎಂಬುವರು ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು.ಇದನ್ನು ಜೀರ್ಣಿಸಿಕೊಳ್ಳದ ಜಾತಿವಾದಿ ಪೋಷಕರು ಇವರಿಬ್ಬರನ್ನು 14 ಸೆಪ್ಟೆಂಬರ್, 2014ರಂದು ಅಮಾನುಷವಾಗಿ ಶಿವಳ್ಳಿಯಲ್ಲೇ ಕೊಂದು ರಕ್ತಪಾತ ಮಾಡಿದ್ದರು.ಇದೇ ರೀತಿಯಲ್ಲಿ ಕಸ್ತೂರಿ ಮತ್ತು ಬಸವರಾಜ ಎಂಬ ಪ್ರೇಮಿಗಳುಮನೆಯವರ ವಿರೋಧವನ್ನು ಲೆಕ್ಕಿಸದೆ ವಿವಾಹವಾಗಲು ಮುಂದಾಗಿದ್ದರು.ಇದನ್ನು ಸಹಿಸದ ಇವರ ಕುಟುಂಬ ಸದಸ್ಯರು 5 ಜುಲೈ, 2015ರಂದು ಇವರಿಬ್ಬರನ್ನು ಮಾರಕಾಸ್ತ್ರಗಳಿಂದ ರಣಭೀಕರವಾಗಿ ಕೊಚ್ಚಿ ಮಾರಣಹೋಮ ಮಾಡಿದ್ದರು.ಇದೇ ರೀತಿಯಲ್ಲಿ ಈ ಘಟನೆಯಾದ ಎರಡೇ ತಿಂಗಳಲ್ಲಿ ಅಂದರೆ 12ಸೆಪ್ಟೆಂಬರ್, 2015ರಂದು ರಾಮನಗರ ಜಿಲ್ಲೆಯಲ್ಲಿ ಕೆಳವರ್ಗದ ಹುಡುಗನನ್ನು ಪ್ರೇಮಿಸುತ್ತಿದ್ದ ಮೇಲ್ಜಾತಿಯ ಹುಡುಗಿಯೊಬ್ಬಳ ಹತ್ಯೆಯಾಗಿತ್ತು. ಇದನ್ನು ಹುಡುಗಿಯ ಕಡೆಯವರೇ ಬಹಳ ಕ್ರೂರವಾಗಿ ಈಕೆಯ ಜೀವವನ್ನು ತೆಗೆದಿದ್ದರು.[12]

ಮಂಡ್ಯ ತಾಲ್ಲೂಕಿನ ತಿಮ್ಮನಹೊಸೂರು ಗ್ರಾಮದ ಯುವತಿ ಮೋನಿಕಾ ಮಂಡ್ಯದ ಗಾಂಧಿನಗರದಲ್ಲಿನ ಸೋದರ ಮಾವನ ಮನೆಯಲ್ಲಿದ್ದುಕೊಂಡು ದಿನನಿತ್ಯ ಬಸ್ ಪ್ರಯಾಣ ಮಾಡುತ್ತಾ ಇದೇ ತಾಲ್ಲೂಕಿನ ಕೊಮ್ಮೇರಹಳ್ಳಿಯ ವಿಶ್ವಮಾನವ ಪದವಿಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಳು.ಈ ಸಂದರ್ಭದಲ್ಲಿ ಈಕೆಗೆ ಇದೇ ಗಾಂಧಿನಗರದಲ್ಲಿನ ದಲಿತ ಯುವಕ ನರೇಂದ್ರಬಾಬುವಿನ ಮೇಲೆ ಪ್ರೇಮ ಬೆಳೆದಿತ್ತು.ಇಬ್ಬರೂ ಒಂದು ವರ್ಷದಿಂದಲೂ ಪರಸ್ಪರ ಪ್ರೀತಿಸುತ್ತಿದ್ದರು.ಇದು ಈಕೆಯ ಕುಟುಂಬದವರ ಗಮನಕ್ಕೆ ಬಂದು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು.ಇದರಿಂದ ಅತೃಪ್ತಗೊಂಡ ಮೋನಿಕಾ 28ಮಾರ್ಚ್, 2016ರಂದು ಮನೆಬಿಟ್ಟು ಹೋಗಿದ್ದಳು.ಈಕೆಯ ಪೋಷಕರು 30ಮಾರ್ಚ್, 2016ರಂದು

ಪೊಲೀಸರಿಗೆ ದೂರು ನೀಡಿದ್ದರು.ಮೋನಿಕಾಳು ಇದಾದ ಮೂರನೇ ದಿನಕ್ಕೆ ಮನೆಗೆ ವಾಪಸ್ಸಾದ್ದರಿಂದ 1ಏಪ್ರಿಲ್, 2016ರಂದು ಪೋಷಕರೊಡನೆ ಪೊಲೀಸ್ ಠಾಣೆಗೆ ಹಾಜರಾಗಿ ಕೆಮಿಸ್ಟ್ರಿ ಪರೀಕ್ಷೆ ಇದ್ದುದರಿಂದ ಓದಿಕೊಳ್ಳಲು ಬೆಂಗಳೂರಿನಲ್ಲಿದ್ದ ನನ್ನ ಮಾವ ಗೋಪಾಲಕೃಷ್ಣರ ಮನೆಗೆ ಹೋಗಿದ್ದೆನೆಂದು ಹೇಳಿಕೆ ನೀಡಿ, ಪೊಲೀಸರಿಗೆ ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟು ಮನೆಗೆ ವಾಪಸ್ಸಾಗಿದ್ದರು.

ಇದಾದ ಬಳಿಕ ಮೋನಿಕಾ 2ಏಪ್ರಿಲ್, 2016ರ ರಾತ್ರಿ ತಾನು ಪ್ರೀತಿಸಿದ ಹುಡುಗನ ಜೊತೆ ಮನೆಬಿಟ್ಟು ಓಡಿಹೋಗಲು ಪ್ರಯತ್ನಿಸಿದ್ದಳು.ಇವಳ ಪೋಷಕರು ಈಕೆಯನ್ನು ಪತ್ತೆ ಮಾಡಿ ಮನೆಗೆ ವಾಪಸ್ಸು ಕರೆತಂದರು. ನಂತರ ಈಕೆಯ ತಂದೆ ಹೆಚ್.ಬಿ. ಮೋಹನ್, ಸೋದರ ಮಾವ ಡಿ. ಸುರೇಶ್ ಎಂಬುವರು ಆಕೆಗೆ ನೀನು ಪ್ರೀತಿಸುತ್ತಿರುವ ಹುಡುಗನೊಂದಿಗೆ ಕಳಿಸುತ್ತೇವೆಂದು ನಂಬಿಸಿ, ಆಕೆಯಿಂದಲೇ ಡೆತ್ ನೋಟ್ ಬರೆಸಿಕೊಂಡು ಬಳಿಕ ಆಕೆಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು.ಅಲ್ಲದೆ ತಮ್ಮ ಕಾಲುಗಳಿಂದಲೇ ಕುತ್ತಿಗೆಯನ್ನು ಅದುಮಿ ಕೊಲೆ ಮಾಡಿದರು.ನಂತರ ಈಕೆಯ ಶವದ ಕುತ್ತಿಗೆ ಬಿಗಿದು ತಮ್ಮ ಮನೆಯ ಮುಂದಿದ್ದ ಗಸಗಸೆ ಮರಕ್ಕೆ ನೇಣು ಹಾಕಿದ್ದರು. 3ಏಪ್ರಿಲ್, 2016ರ ಬೆಳಗ್ಗೆ ಊರಿನವರ ಮುಂದೆ ಸಂದೇಹಾಸ್ಪದವಾಗಿ ವರ್ತಿಸಿ, ತರಾತುರಿಯಲ್ಲಿ ಆಕೆಯ ಶವವನ್ನು ತಮ್ಮ ಕಬ್ಬಿನ ಗದ್ದೆಯ ಖಾಲಿ ಜಾಗದಲ್ಲಿ ಸುಟ್ಟುಹಾಕಿದ್ದರು.[13]

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಗೊಲ್ಲನಬೀಡು ಗ್ರಾಮದ ನಿವಾಸಿ ಮೇಲ್ವರ್ಗದ ಕುಮಾರ್ ಎಂಬುವರ ಮಗಳಾದ ಸುಷ್ಮಾ ಎಂಬ ಯುವತಿ ಇದೇ ತಾಲ್ಲೂಕಿನ ಆಲನಹಳ್ಳಿ ಗ್ರಾಮದ ಉಮೇಶ್ ಎಂಬ ದಲಿತ ಜಾತಿಯ ಯುವಕನನ್ನು ಒಂದು ವರ್ಷದಿಂದ ಪ್ರೀತಿಸುತ್ತಿದ್ದಳು.ಇದಕ್ಕೆ ಮನೆಯವರಿಂದ ತೀವ್ರ ವಿರೋಧ ವ್ಯಕ್ತವಾಗಿ ಸುಷ್ಮಾಳನ್ನು ಕಾಲೇಜಿನಿಂದ ಬಿಡಿಸಿದ್ದರು.ಆದರೂ ಈಕೆ ಉಮೇಶ್ ಜೊತೆಗೆ ಪ್ರೀತಿಯನ್ನು ಮುಂದುವರಿಸಿದ್ದರಿಂದ ಇವಳ ಪೋಷಕರಿಗೆ ನುಂಗಲಾರದ ತುತ್ತಾಗಿತ್ತು. ಜೊತೆಗೆ ಸುಷ್ಮಾ ಈತನನ್ನು ಮದುವೆಯಾಗುತ್ತೇನೆಂದು ಹಠ ಹಿಡಿದಿದ್ದರಿಂದ ಆಕ್ರೋಶಗೊಂಡ ಕುಮಾರ್ 21ಫೆಬ್ರವರಿ, 2018ರಂದು ಈಕೆಗೆ  ವಿಷ ಕುಡಿಸಿ ನೇಣು ಬಿಗಿದು ಸಾಯಿಸಿ ತಮ್ಮ ಜಮೀನಿನಲ್ಲಿ ಸುಟ್ಟು ಭಸ್ಮ ಮಾಡಿದ್ದನು.[14]ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಸರಗೂರು ಬಳಿಯ ದಡದಹಳ್ಳಿಯಲ್ಲಿ ಮೇಲ್ಜಾತಿಗೆ ಸೇರಿದ ಶೋಭ ಎಂಬಾಕೆಯ ಮರ್ಯಾದೆಗೇಡು ಹತ್ಯೆಯಾಗಿತ್ತು.ಈಕೆ ಕೆಳಜಾತಿಯ ಕೃಷ್ಣ ಎಂಬಾತನನ್ನು ಪ್ರೀತಿಸಿದ್ದಳು.ಇದು ಈಕೆಯ ತಂದೆ ಗುರುಸಿದ್ದೇಗೌಡ, ತಾಯಿ ಮಹದೇವಮ್ಮರವರಿಗೆ ತಿಳಿದು ವಿರೋಧಿಸಿದ್ದರು.ಆದರೂ ಇದಕ್ಕೆ ಹೆದರದೆ ಈಕೆ ತನ್ನ ಪ್ರಿಯಕರ ಕೃಷ್ಣನ ಜೊತೆ ಓಡಿಹೋಗಿ ಮದುವೆಯಾಗಲು ಮುಂದಾಗಿದ್ದಳು.ಅದೇ ದಿನ ಈಕೆಯ ಪೋಷಕರಾದ ಗುರುಸಿದ್ದೇಗೌಡ, ಕಿರಣ್, ಮಹೇಶ್, ರಾಮೇಗೌಡ ಶೋಭಾಳನ್ನು ಅಡ್ಡಗಟ್ಟಿ ಹಲ್ಲೆ ಮಾಡಿದರು.ಅಲ್ಲದೆ ಈಕೆಯನ್ನು ಕೊಲೆ ಮಾಡಿ

ಊರಿನ ದೇವಸ್ಥಾನದ ಬಳಿ ಸುಟ್ಟು ಹಾಕಿದ್ದರು.ಹೀಗಾಗಿ ಕೆಲವು ದಿನಗಳ ನಂತರ ಈಕೆಯ ಅರ್ಧ ಬೆಂದ ಮೃತದೇಹ ಪತ್ತೆಯಾಗಿತ್ತು.[15]ಕಲಬುರಗಿಯಲ್ಲಿ ಲಕ್ಷ್ಮೀಬಾಯಿ ಎಂಬ ವಿಧವೆ ತನ್ನ ಮಕ್ಕಳೊಂದಿಗೆ ಜೀವನ ಸಾಗಿಸುತ್ತಿದ್ದಳು.ಇಂತಹ ಸಂದರ್ಭದಲ್ಲಿ ಶರಣಪ್ಪ ಎಂಬಾತ ಈಕೆಯನ್ನು ಮದುವೆಯಾಗಿದ್ದನು.ತಮ್ಮ ಮಗಳು ಅಂತರ್ಜಾತಿ ವಿವಾಹವಾದಳೆಂಬ ಸಿಟ್ಟಿನಿಂದ ಈಕೆಯ ಪೋಷಕರು ಒಂದೇ ದಿನ ಇವರಿಬ್ಬರುಗಳ ಕೊಲೆ ಮಾಡಿ ಸಾಕ್ಷಿ ಸಿಗದಂತೆ ಮಾಡಿದ್ದರು.[16]ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಮರವಂಜಿ ಗ್ರಾಮದಲ್ಲಿ ಪರಮೇಶ್ವರಪ್ಪ ಮತ್ತು ಪುಷ್ಪಾ ದಂಪತಿಗಳ ಹಿರಿಯ ಮಗಳು (ಅಪ್ರಾಪ್ತ ಬಾಲಕಿ) ಅನ್ಯ ಜಾತಿಯ ಹುಡುಗನಾದ ಪ್ರವೀಣ್ ಎಂಬಾತನನ್ನು ಪ್ರೀತಿಸಿ ಆತನೊಂದಿಗೆ ಓಡಿಹೋಗಿದ್ದಳು.ಇದಕ್ಕೆ ಸಂಬಂಧಿಸಿದಂತೆ ಈಕೆಯ ಪೋಷಕರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು.ನಂತರ ಪೊಲೀಸರು ಹುಡುಕಿ ಇಬ್ಬರನ್ನು ಕರೆತಂದು ಪೋಕ್ಸೋ ಕಾಯ್ದೆಯಡಿ ಆತನನ್ನು ಬಂಧಿಸಿ ಜೈಲಿಗಾಕಿದ್ದರು.ಇದನ್ನು ಸಹಿಸದ ಈ ಹುಡುಗಿ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ, ಆಸ್ಪತ್ರೆಗೆ ದಾಖಲಾಗಿ ಪ್ರಾಣಾಪಾಯದಿಂದ ಪಾರಾಗಿದ್ದಳು.ಆದರೆ ಪುನಃ ಈ ಪ್ರಕರಣದ ಹಿನ್ನಲೆಯಲ್ಲಿ 26ಜೂನ್, 2018ರಲ್ಲಿ ಕ್ರಿಮಿನಾಶಕ ಸೇವಿಸಿ ಸಾಯಲು ಮುಂದಾಗಿದ್ದಳು. ಇದನ್ನು ಸಹಿಸದ ಈಕೆಯ ತಂದೆ ತನ್ನ ತಾಯಿ ದ್ರಾಕ್ಷಾಯಣಮ್ಮಳ ನೆರವಿನಿಂದ ಮರ್ಯಾದೆಗೋಸ್ಕರ ಕತ್ತು ಹಿಸುಕಿ ಕೊಲೆ ಮಾಡಿಸಿದ್ದರು.[17]

ಇವೆಲ್ಲ ಘಟನೆಗಳನ್ನು ಅವಲೋಕಿಸಿದಾಗ ಒಂದು ತೀರ್ಮಾನಕ್ಕೆ ಬರಬಹುದು.ಅಂತರ್ಜಾತಿ ವಿವಾಹಗಳಿಂದ 'ಜಾತಿವಿನಾಶ ಅಸಾಧ್ಯ ಅನ್ಯಜಾತಿ ಪ್ರೇಮಿಗಳು, ವಿವಾಹಿತರ ಹತ್ಯೆ ನಿರಂತರ' ಎಂಬುದು.ಪ್ರಸ್ತುತ ಸಂದರ್ಭದಲ್ಲಿ ಒಂದು ಪ್ರಶ್ನೆ ಎದುರಾಗುತ್ತದೆ.'ಅಂತರ್ಜಾತಿ ವಿವಾಹಗಳಿಂದ ಜಾತಿವಿನಾಶ ಸಾಧ್ಯವೇ'?ಇದಕ್ಕೆ ಉತ್ತರವನ್ನು ಯಾವುದೇ ಕಾರಣಕ್ಕೂ ಇಂತಹ ವಿವಾಹಗಳಿಂದ ಜಾತಿವಿನಾಶ ಸಾಧ್ಯವೇ ಇಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು.ಮೇಲ್ಕಾಣಿಸಿದ ಘಟನೆಗಳ ವಿವರಣೆಯಿಂದ ಒಂದು ಪ್ರಧಾನ ಅಂಶವನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕಿದೆ.ಯಾರೊಬ್ಬರೂ ಸನಾತನ ಕಾಲದಿಂದಲೂ ರೂಢಿಗತವಾಗಿ ಬಂದಿರುವ ಮೇಲ್ವರ್ಗದ ಜಾತಿಶ್ರೇಷ್ಟತೆ ಮತ್ತು ಕುಲಪ್ರತಿಷ್ಟೆಯನ್ನು ಕೆಳಜಾತಿಗಳೆಂದು ಸಮಾಜದಲ್ಲಿ ಪರಿಗಣಿಸಲ್ಪಟ್ಟಿರುವ ಸಮುದಾಯಗಳ ಜೊತೆ ವೈವಾಹಿಕ ಸಂಬಂಧಗಳ ಮೂಲಕ ಸಮ್ಮಿಲನಗೊಳಿಸಲು ಮುಂದಾಗಲು ಇಷ್ಟಪಡುವುದಿಲ್ಲ. ಇಲ್ಲಿ ಇವರು ತಮ್ಮ ಮೇಲ್ಜಾತಿಯ ವರ್ಗಶ್ರೇಷ್ಠತೆ ಮತ್ತು ಸ್ಥಾನಮಾನಗಳನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಔದ್ಯೋಗಿಕವಾಗಿ ಮತ್ತಷ್ಟು ಭದ್ರಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾರೆಯೇ ಹೊರತು ಅದಕ್ಕೆ ಧಕ್ಕೆ ಬರದ ಹಾಗೆ ಮುತುವರ್ಜಿ ವಹಿಸುವುದು ತಮ್ಮ ಆದ್ಯ ಕರ್ತವ್ಯ ಎಂದು ಭಾವಿಸಿದ್ದಾರೆ. ಇವರಲ್ಲಿ ಉಪಜಾತಿಗಳಿದ್ದರೂ ಕೂಡ ಜಾತಿ ವಿಚಾರ ಬಂದಾಗ ಐಕ್ಯತೆಗೆ ಕೊರತೆ ಇಲ್ಲ. ಆದರೆ ಕೆಳಜಾತಿಗಳಲ್ಲಿ ಇದರ ಕೊರತೆ ಎದ್ದ ಕಾಣುತ್ತದೆ.ಹೀಗಾಗಿ

ಇಂತಹ ಮರ್ಯಾದೆಗೇಡು ಹತ್ಯೆಗಳ ಪ್ರಕರಣಗಳಲ್ಲಿ ತೊಂದರೆಗೆ ಒಳಗಾಗುತ್ತಿರುವವರು ಬಹುತೇಕವಾಗಿ ಈ ಸಮುದಾಯಗಳ ಯುವಕ ಮತ್ತು ಯುವತಿಯರೇ ಆಗಿದ್ದಾರೆ.ಆದುದರಿಂದ ಅಂತರ್ಜಾತಿ ವಿವಾಹಗಳಿಂದಾಗುತ್ತಿರುವ ಮರ್ಯಾದೆಗೇಡು ಹತ್ಯೆಗಳನ್ನು ತಡೆಯಬೇಕಾದ ಅನಿವಾರ್ಯತೆ ಪ್ರಸ್ತುತ ಸಂದರ್ಭದಲ್ಲಿ ಎದುರಾಗಿದೆ.

- **ಮರ್ಯಾದೆಗೇಡು ಹತ್ಯೆಗಳನ್ನು ತಡೆಗಟ್ಟಲೇಬೇಕಾದ ಅನಿವಾರ್ಯತೆ:**

ಮೊದಲಿಗೆ ಭಾರತ ದೇಶದ ಪವಿತ್ರವಾದ ಧಾರ್ಮಿಕ ಗ್ರಂಥ 'ಸಂವಿಧಾನ'ವೇ ಆಗಿದೆ.ಇದರ ಧ್ಯೇಯ ವಾಕ್ಯ 'ನಾವೆಲ್ಲರೂ ಭಾರತದ ನಾಗರಿಕರು' ಎಂಬುದಾಗಿದೆ.ಇದರಲ್ಲಿ ಸರ್ವರಿಗೂ ಜಾತ್ಯತೀತವಾಗಿ ಸಮಾನ ಸೇವಾಸೌಲಭ್ಯಗಳು, ಶೈಕ್ಷಣಿಕ, ಔದ್ಯೋಗಿಕ ಮೀಸಲಾತಿಯ ಅನುಕೂಲಗಳನ್ನು ಒದಗಿಸಲಾಗಿದೆ.ಇದರ ಸವಲತ್ತುಗಳ ಹಿನ್ನಲೆಯಲ್ಲಿ ಯಾವುದೇ ಜಾತಿಕಲಹ, ಕೋಮುದ್ವೇಷ, ಮತೀಯ ಭಾವನೆಗಳಿಗೆ ಆಸ್ಪದ ಕೊಡದೆ ಎಲ್ಲರೂ ಸಕಲ ಪ್ರೀತಿ, ವಿಶ್ವಾಸ, ಸಾಮರಸ್ಯಗಳಿಂದ ಜೀವಿಸಬೇಕೆಂದು ತಿಳಿಸಿದೆ.ಈ ನಿಟ್ಟಿನಲ್ಲಿ ಜಾತಿರಹಿತ ಸಮಾಜದ ಅನುಷ್ಠಾನ ಕನಸಾಗಿರುವುದರಿಂದ ಅಂತರ್ಜಾತಿ ವಿವಾಹಗಳಿಂದ ಉದ್ಭವವಾಗುವ ದ್ವೇಷಾಸೂಯೆಯುಕ್ತ ಮಾರಣಹೋಮಗಳಿಗೆ ತಿಲಾಂಜಲಿ ಇಟ್ಟು ಪರಸ್ಪರ ಸ್ವಜಾತಿಯಲ್ಲೇ ವೈವಾಹಿಕ ಸಂಬಂಧಗಳಿಗೆ ಪ್ರಥಮ ಆದ್ಯತೆ ನೀಡಬೇಕಾಗಿದೆ.ಜೊತೆಗೆದಲಿತ ಸಮುದಾಯದ ತರುಣತರುಣಿಯರು, ಸರ್ಕಾರಿ ನೌಕರರು ಅಂತರ್ಜಾತಿ ವಿವಾಹಗಳಿಗೆ ಆಯಾತಪ್ಪಿಯೂ ಯೋಚಿಸದೆ ತಮ್ಮಗಳ ನಡುವೆ ಇರುವ ಉಪಜಾತಿಗಳ ಅಂತರಿಕ ಅಂತರವನ್ನು ಮೂಲೆಗೆ ಸರಿಸಬೇಕಾಗಿದೆ.

ಇದಕ್ಕೆ ಇಂಬು ಎಂಬಂತೆ ದಲಿತಪರ ಚಿಂತಕರು ಹಾಗೂ ಬರಹಗಾರರು ಆಗಿದ್ದ ದೇವಯ್ಯ ಹರವೆಯವರ ದಲಿತ ಸಂವೇದನೆಯ ಹೇಳಿಕೆ ಈ ಸಂದರ್ಭದಲ್ಲಿಬಹಳ ಅತ್ಯವಶ್ಯಕವಾಗಿದೆ.ಅದೇನೆಂದರೆ 'ಅಂತರ್ಜಾತಿ ವಿವಾಹದಿಂದ ಜಾತಿವಿನಾಶ ಅಸಾಧ್ಯ. ಹೀಗಾಗಿ ಈ ಪ್ರಕ್ರಿಯೆಯನ್ನು ನಾನು ವಿರೋಧಿಸುತ್ತೇನೆ. ದಲಿತರು ಅಂತರ್ಜಾತಿ ವಿವಾಹದ ಹೆಸರಿನಲ್ಲಿ ಅನ್ಯಜಾತಿಯ ಯುವತಿಯರನ್ನು ಮದುವೆಯಾಗಲು ಮುಂದಾಗುತ್ತಿದ್ದರೆ, ತಮ್ಮ ಸಮುದಾಯದ ಬಡ ಹೆಣ್ಣುಮಕ್ಕಳಿಗೆ ಬಾಳು ಕೊಡುವವರ್ಯಾರು?ಎಂದು ಪ್ರಶ್ನಿಸಿದ್ದಾರೆ.ಜೊತೆಗೆದಲಿತ ಸಮುದಾಯದ ಯುವಕರು ತಮ್ಮ ಸಮುದಾಯದ ಹೆಣ್ಣುಮಕ್ಕಳನ್ನು ವಿವಾಹವಾಗುವುದರ ಮೂಲಕ ತಮ್ಮಗಳ ನಡುವಿರುವ ಜಾತಿ–ಉಪಜಾತಿಗಳ ಅಂತರವನ್ನು ಮೂಲೋತ್ಪಾಟನೆ ಮಾಡಿ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು' ಎಂದು ಕರೆನೀಡಿದ್ದರು. ಹೀಗಾಗಿ ಮರ್ಯಾದೆಗೇಡು ಹತ್ಯೆಗಳ ಪ್ರಸ್ತುತ ಸಂದರ್ಭದಲ್ಲಿ ಇವರ ಈ ಮಾತು ಬಹಳ ಮುಖ್ಯವಾದದ್ದಾಗಿದೆ.[18]ಏಕೆಂದರೆ ಅಂತರ್ಜಾತಿ ವಿವಾಹವಾದ ಮೇಲ್ಜಾತಿ–ಕೆಳಜಾತಿಗಳ ಹುಡುಗ–

ಹುಡುಗಿಯರ ಭೀಕರ ಹತ್ಯೆಯಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ದಲಿತ ಸಮುದಾಯ ಎಚ್ಚೆತ್ತುಕೊಳ್ಳಬೇಕಿದೆ.

- **ಪರಿಸಮಾಪ್ತಿ:**

ಇಂದು ಕೂಡ ದಲಿತ ಸಮಾಜದಲ್ಲಿ ಹೊಲೆಯ–ಮಾದಿಗ ಸಮುದಾಯಗಳ ನಡುವೆ ಜಾತಿ–ಉಪಜಾತಿಗಳ (ಎಡಗೈ–ಬಲಗೈ) ಆಂತರಿಕ ತಿಕ್ಕಾಟ, ಬಿ.ಆರ್. ಅಂಬೇಡ್ಕರ್‌ರವರ ಛಲವಾದಿ ಮಹಾಸಭಾ ಹಾಗೂ ಬಾಬು ಜಗಜೀವನರಾಂರವರ ಮಾದಿಗರ ಸಂಘ ಎಂಬ ವೈಯುಕ್ತಿಕ ಮೇಲರಿಮೆ–ಕೀಳರಿಮೆ, ಸಾಮಾಜಿಕ ಅಂತರ, ಒಳಮೀಸಲಾತಿ, ಕೆನೆಪದರಗಳ ಹೆಸರಿನಲ್ಲಿ ಭಿನ್ನತೆಗಳು ಆಂತರಿಕ ಭಿನ್ನಾಭಿಪ್ರಾಯಗಳು, ತಿಕ್ಕಾಟಗಳು, ಸಂಘರ್ಷಗಳು ಘಟಿಸುತ್ತಿವೆ. ಹೀಗಾಗಿ ಇವೆಲ್ಲವನ್ನು ಗಮನಿಸಿದಾಗ ದಲಿತ ಸಮುದಾಯಗಳು ಅಂತರ್ಜಾತಿ ವಿವಾಹಗಳ ಪ್ರಯತ್ನಗಳನ್ನು ಮರೆತು ಸ್ವಉಪಜಾತಿ (ಹೊಲೆಯ–ಮಾದಿಗ) ವಿವಾಹಗಳಿಗೆ ಹೆಚ್ಚು ಮನ್ನಣೆ ನೀಡಿ ಕಾರ್ಯಗತಗೊಳಿಸಿ ತಮ್ಮಗಳ ನಡುವಿನ ಜಾತಿ–ಉಪಜಾತಿಗಳ ಅಂತರವನ್ನು ಮೆಟ್ಟಿನಿಲ್ಲಬೇಕಾದ ಅನಿವಾರ್ಯತೆ ಪ್ರಸ್ತುತ ವಿದ್ಯಮಾನಗಳಲ್ಲಿ ಅತ್ಯವಶ್ಯಕವಾದುದಾಗಿದೆ. ಹೀಗಾಗಿ ಈ ದಿಸೆಯಲ್ಲಿ ದಲಿತ ಸಮುದಾಯದ ಉಪಜಾತಿಗಳ ತರುಣ–ತರುಣಿಯರು, ಪೋಷಕ ವೃಂದಗಳು ತಮ್ಮಗಳ ಆಂತರಿಕ ಭಿನ್ನಾಭಿಪ್ರಾಯ, ವೈಮನಸ್ಸು, ಮುನಿಸು, ಬಿಗುಮಾನ, ಭಿನ್ನಾಣಗಳನ್ನು ಬದಿಗಿರಿಸಿ ಒಗ್ಗಟ್ಟಾಗಿ ನಿಂತು ತಮ್ಮ ಸ್ವಉಪಜಾತಿ ವಿವಾಹಗಳಿಗೆ ಮಣೆ ಹಾಕಿ ಮರ್ಯಾದಾ ಹತ್ಯೆಗಳನ್ನು ಧೂಳೀಪಟ ಮಾಡಿ ತಮ್ಮ ಸಮುದಾಯದ ಬದುಕಿಗೆ ನೆಮ್ಮದಿಯ ಬೆಳಕನ್ನು ನೀಡುವ ಆಶಾಜ್ಯೋತಿಗಳಾಗಬೇಕಿದೆ.ಜೊತೆಗೆ ದ್ವೇಷಾಸೂಯೆಗಳ ಸಂಕೇತವಾದ ಅಂತರ್ಜಾತಿ ವೈವಾಹಿಕ ಸಂಬಂಧಗಳಿಗೆ ತಿಲಾಂಜಲಿಯಿಟ್ಟು ತಮ್ಮ ಭವ್ಯ ಬದುಕಿನ ಉಜ್ವಲದ ಭವಿಷ್ಯದ ನಿರ್ಮಾಣದ ಕಡೆ ದಿಟ್ಟಹೆಜ್ಜೆಯನ್ನು ಇಡಬೇಕಾಗಿದೆ. ಅದರಲ್ಲೂ ಬಹುಕಾಲದಿಂದಲೂ ಅಸ್ತಿತ್ವದಲ್ಲಿರುವ ಎಡಗೈ–ಬಲಗೈ ಎಂಬ ಉಪಜಾತಿಗಳ ನಡುವಿನ ಸಂಬಂಧಗಳ ಬಿರುಕಿನ ಗಾಯಕ್ಕೆ ಬಿ.ಆರ್.ಅಂಬೇಡ್ಕರ್ ಮತ್ತು ಜಗಜೀವನರಾಮ್‌ರವರ ತತ್ವಸಿದ್ಧಾಂತಗಳೆಂಬ 'ಔಷಧ'ವನ್ನು ಲೇಪಿಸಿ ಐಕ್ಯತೆಯ ರಥವನ್ನು ಮುಂದೆ ಸಾಗಿಸಬೇಕಾದ ಅನಿವಾರ್ಯತೆ ಇದೆ.ಜೊತೆಗೆ ಪ್ರಸ್ತುತ ಜಾತಿರಾಜಕಾರಣದ ವಿದ್ಯಮಾನಗಳನ್ನು ಗಮನಿಸುತ್ತಿರುವ ಈ ಎರಡು ಉಪಜಾತಿಗಳು ಅತಿ ಜರೂರಾಗಿ ತಮ್ಮ ನಡುವಿನ ಅಸಹನೆಯ ಸಂಬಂಧಗಳಿಗೆ ಮಂಗಳ ಹಾಡಿ ಒಂದಾಗಿ ರಾಜ್ಯಾಧಿಕಾರ ಹಿಡಿಯುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಿದೆ.

- **ಆಕರಸೂಚಿಗಳು:**

1. ಹೆಚ್. ಗೋವಿಂದಯ್ಯ (ನಿವೃತ್ತ ಪ್ರಾಧ್ಯಾಪಕರು ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಕ.ದ.ಸಂ.ಸ.) ಹೋರಾಟಗಾರರು ಮತ್ತು ಕವಿಗಳು, ಪಂಚಮ ಪತ್ರಿಕೆಯ ಸಂಪಾದಕರು, ಮೈಸೂರು) ರವರ ಸಂದರ್ಶನ, ಭಾನುವಾರ, 2 ಜನವರಿ, 2011.
2. ಶಂಭಯ್ಯ (ದಲಿತ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಂಚಾಲಕರು ಮತ್ತು ಕ.ದ.ಸಂ.ಸ.ದ ಹೋರಾಟಗಾರರು, ಮೈಸೂರು) ರವರ ಸಂದರ್ಶನ, ಶುಕ್ರವಾರ, 11 ಡಿಸೆಂಬರ್, 2010.
3. ಉಗ್ರನರಸಿಂಹೇಗೌಡರವರ (ಮುಖ್ಯಸ್ಥರು, ಮಾನವ ಮಂಟಪ, ಮೈಸೂರು) ಸಂದರ್ಶನ, ಗುರುವಾರ, 17,ನವೆಂಬರ್, 2010.
4. ಪ್ರಧಾನ ಸಂಪಾದಕರು– ಅರವಿಂದ ಮಾಲಗತ್ತಿ, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ2, ದಲಿತ ಚಳವಳಿ, ಭಾಗ–3, ದಲಿತ ಸಂಘಟನೆಯ ಹೋರಾಟದ ಹೆಜ್ಜೆಗಳು, ಹೋರಾಟಗಳ ಜಿಲ್ಲಾವಾರು ಸಮೀಕ್ಷೆ, 2014, ಪುಟ.453
5. ಅದೇ..........., ಪುಟ.441.
6. ಅದೇ............, ಪುಟ.532.
7. ಅದೇ..............., ಪುಟ.483.
8. THE NEW INDIAN EXPRESS, Karnataka honour killing: Two arrested as couple hacked to death in Gadag, Published, 8th November, 2019, Pp1.
9. The Times of India, Honour killing claimes women's life in Mandya, January 7, 2012.
10. Editor- K. Sadashiva, Journal of Historical Studies, Vol.51, Department of Studies in History, University of Mysore, Manasagangotri, Mysuru, Writer- M.S. Anitha, Article-Recent violence on Dalits in Southern Karnataka: A case study of 'Honour Killing's' in Mandya District, 2017, Pp.49-50.
11. Maryade Hatye, 6 Jan 2012, Suvarna News 24X7.
12. THE NEW INDIAN EXPRESS, Karnataka honour killing: Two arrested as couple hacked to death in Gadag, Published, 8th November, 2019, Pp1.
13. Vijayakarnataka.com/news/crime/maryade-hatye-fad-killed-daughter-in-Mandya/articleshow/51690695.cms.
14. ದಲಿತ ಯುವಕನನ್ನು ಪ್ರೀತಿಸಿದ ತಪ್ಪಿಗೆ ಮಗಳನ್ನೇ ಕೊಂದ್ರಾ ಪೋಷಕರು? ಪಬ್ಲಿಕ್ ಟಿವಿ, 1/3/2018.
15. ಕರ್ನಾಟಕ ಟಿವಿ9 ವಾರ್ತೆ, ಪೋಷಕರಿಂದ ಮಗಳ ಮರ್ಯಾದೆ ಹತ್ಯೆ.

16. Googlechrone, maryadehatye in Karnataka.
17. THE NEW INDIAN EXPRESS, Karnataka honour killing: Two arrested as couple hacked to death in Gadag, Published, 8th November, 2019, Pp1.
18. ದೇವಯ್ಯ ಹರವೆ, ಕತ್ತಲಾಳದ ಕಿರಣಗಳು, ನೆಲಮನೆ ಪ್ರಕಾಶನ, ಮೈಸೂರು, ೧೯೮೨.